ಕರ್ನಾಟಕಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ ನಾ[illegible]ಕಭೇರಿ ಹೊಸಹಳ್ಳಿ

ಸಂ/ಕಂ/ಹ.ಬ./ನಾಕಹೊ/44/2013-14. ದಿನಾಂಕ:19-09-2016.

| ವಾದಿಗಳು | ಪ್ರತಿವಾದಿಗಳು |
| --- | --- |
| ಅಂಗಡಿ ಗಂಗಮ್ಮ ಗಂಡ ಲೇಟ್ ಅಂಗಡಿ ಅಜ್ಜಪ್ಪ<br>ಸಕಲಾಪುರದಹಟ್ಟಿ ಗ್ರಾಮ<br>ಕೂಡ್ಲಿಗಿ ತಾಲೂಕು | 1)ಎ.ಇಂದ್ರಣ್ಣ ತಂದೆ ಲೇಟ್ ಅಜ್ಜಪ್ಪ<br>2)ಎ.ಕೊಟ್ರೇಶ ತಂದೆ ಲೇಟ್ ಅಜ್ಜಪ್ಪ<br>ಸಕಲಾಪುರದಹಟ್ಟಿ ಗ್ರಾಮ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಲೋಕಿಕೆರೆ ಗ್ರಾಮದ ಸನಂ 373ಬಿಪೈಕಿ. ವಿಸ್ತೀರ್ಣ 3-40 ಎಕ್ರೆ ಜಮೀನನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಲೋಕಿಕೆರೆ ಗ್ರಾಮದ ಸನಂ 373ಬಿಪೈಕಿ. ವಿಸ್ತೀರ್ಣ 3-40 ಎಕ್ರೆ ಜಮೀನನ್ನು ಸದರಿ ತಾಲೂಕು ಸಕಲಾಪುರದಹಟ್ಟಿ ಗ್ರಾಮದ ಅಂಗಡಿ ಗಂಗಮ್ಮ ಗಂಡ ಲೇಟ್ ಅಂಗಡಿ ಅಜ್ಜಪ್ಪ ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಲೋಕಿಕೆರೆ ಇವರು ನಮೂನೆ-21 ನೋಟಿಸನ್ನು ದಿನಾಂಕ 09-12-2010. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ತಾಲೂಕು ಸಕಲಾಪುರದಹಟ್ಟಿ ಗ್ರಾಮದ ಎ.ಇಂದ್ರಣ್ಣ ತಂದೆ ಲೇಟ್ ಅಜ್ಜಪ್ಪ. ಎ.ಕೊಟ್ರೇಶ ತಂದೆ ಲೇಟ್ ಅಜ್ಜಪ್ಪ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 14/2010-11.. ದಿನಾಂಕ 12-01-2011. ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 21-07-2013 ರಿಂದ 19-09-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಗೈರು ಹಾಜರಾಗಿರುತ್ತಾರೆ. ಅರ್ಜಿದಾರರು ಲೋಕಿಕೆರೆ ಗ್ರಾಮದ ಸನಂ 373ಬಿಪೈಕಿ. ವಿಸ್ತೀರ್ಣ 3-40 ಎಕ್ರೆ ಜಮೀನು ನನ್ನ ಗಂಡನಾದ ಅಜ್ಜಪ್ಪ ತಂದೆ ಹೊಸಮನೆ ಅಂಗಡಿ ಗುರುಸಿದ್ದಪ್ಪ ಇವರ ಹೆಸರಲ್ಲಿ ಜಂಟಿ ಪಟ್ಟಾ ಲೆಕ್ಕ ದಾಖಲೆ ಇದ್ದು ಇವರು ದಿನಾಂಕ 29-05-2010 ರಂದು ನಿಧನ ಹೊಂದಿರುವುದರಿಂದ ವಾರಸ ಹಕ್ಕಿನಂತೆ ನನ್ನ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿ ಅರ್ಜಿ ಮಾತ್ರ ಸಲ್ಲಿಸಿದ್ದು ವಿಚಾರಣೆಗೆ ಗೈರು ಹಾಜರಾಗಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಗೈರು ಹಾಜರಾಗಿರುತ್ತಾರೆ. ಅವರು ಸದರಿ ವಿವಾದಿತ ಜಮೀನು ನಮ್ಮ ತಂದೆಯವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇದ್ದು ಇವರು ನಿಧನ ಹೊಂದಿದ್ದು ಇವರಿಗೆ ಇಬ್ಬರು ಹೆಂಡತಿಯರಿರುತ್ತಾರೆ. ನಾವುಗಳು ಅಣ್ಣ ತಮ್ಮಂದಿರುಗಳು ಸರಿಯಾದ ರೀತಿ ಪಾಲು ವಿಭಾಗ ಮಾಡಿ ಕೊಂಡಿರುವುದಿಲ್ಲ ಕಾರಣ ಪೋತಿವಾರಸು ಪ್ರಕಾರ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ನಮ್ಮ ತಕರಾರು ಎಂದು ಅರ್ಜಿ ಮಾತ್ರ ಸಲ್ಲಿಸಿದ್ದು ವಿಚಾರಣೆಗೆ ಗೈರು ಹಾಜರಾಗಿರುತ್ತಾರೆ.

ಮು.ತಿ.ನೋ-2

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಉಭಯರು ವಿಚಾರಣೆಗೆ ಗೈರು ಹಾಜರಾಗಿರುವ ಅವರಿಗೆ ಈ ಪ್ರಕರಣದಲ್ಲಿ ಆಸಕ್ತಿ ಇಲ್ಲವೆಂದು ಪರಿಗಣಿಸಿ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಲೋಕಿಕೆರೆ ಗ್ರಾಮದ ಸನಂ 373ಬಿಪೈಕಿ. ವಿಸ್ತೀರ್ಣ 3-40 ಎಕ್ರೆ ಜಮೀನನ್ನು ಉಭಯರು ವಿಚಾರಣೆಗೆ ಗೈರು ಹಾಜರಾಗಿರುವ ಕಾರಣ ಅವರಿಗೆ ಈ ಪ್ರಕರಣದಲ್ಲಿ ಆಸಕ್ತಿ ಇಲ್ಲವೆಂದು ಪರಿಗಣಿಸಿ ಪಹಣಿಯನ್ನು ಯಥಾಸ್ಥಿತಿಯಂತೆ ಮುಂದುವರೆಸಲು ಆದೇಶಿಸುತ್ತಾ ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ಈ ಹಂತದಲ್ಲಿ ಮುಕ್ತಾಯಗೊಳಿಸಲು ಅದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 19-09-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಉಪತಹಶೀಲ್ದಾರರು
ನಾಡಕಛೇರಿ ಹೊಸಹಳ್ಳಿ
ಹೊಸಹಳ್ಳಿ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಅಂಗಡಿ ಗಂಗಮ್ಮ ಗಂಡ ಲೇಟ್ ಅಂಗಡಿ ಅಜ್ಜಪ್ಪ. ಸಕಲಾಪುರದಹಟ್ಟಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಎ.ಇಂದ್ರಣ್ಣ ತಂದೆ ಲೇಟ್ ಅಜ್ಜಪ್ಪ. ಎ.ಕೊಟ್ರೇಶ ತಂದೆ ಲೇಟ್ ಅಜ್ಜಪ್ಪ. ಸಕಲಾಪುರದಹಟ್ಟಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.